# ದಿವ್ಯಪ್ರಭೆಯ ಭವ್ಯ ಬೈರಾಗಿ

ಏನ ನೀಡಲಿ ನಿನಗೆ
ಓ ಭವ್ಯ ಬೈರಾಗಿ
ಬಾಗಿಲಲಿ ನಿಂದಿರುವೆ
ಜ್ವಾಲಾಗ್ನಿಯಾಗಿ

ಮುಂದೆ ಹೋಗೆಂದೆನಲು
ಹೋಗುವವ ನೀನಲ್ಲ
ಕಾಯುವೆನು ಬಹುಕಾಲ
ಎನ್ನುತಿಹೆಯಲ್ಲ!

ನಿನ್ನ ಕಣ್ಣಿನ ಕಾಂತಿ
ಶಿವನ ಕೈ ಅಲಗಂತೆ
ತಿಳಿವ ಮರೆಸಿದ ಭ್ರಾಂತಿ
ಯನು ತಿವಿಯಿತೆ !

ಎನ್ನ ಮನ ಬರಿದಾಗಿ
ಎರಡು ಕೈ ಕೊಳೆಯಾಗಿ
ಅಪರಾಧ ಭಾವದಲಿ
ಮೊಗವು ಬಾಗಿ

ಏನನೂ ನಿನಗಾಗಿ
ನೀಡಲಾರದೆ ನಿಂತೆ
ಮೂಕ ಮೌನದಿ ಕರಗಿ
ಮಾತಿರದೆ ಸೋತೆ

ಓ ಧೀರ ಸಂನ್ಯಾಸಿ,
ಕ್ಷಣದಲ್ಲಿ ಏನಾಯ್ತೊ?
ಯೋಗದಂಡದ ವಿದ್ಯುತ್-
ಸ್ಪರ್ಶವೇನಾಯ್ತೊ!



ದಿವ್ಯ ಪ್ರಭೆಯೊಂದು
ಮಿಂಚಾಗಿ ಸಂಚರಿಸಿ
ಧಮನಿ ಧಮನಿಗೆ ಹರಿದು
ನಾ ಕಾಣದಾದೆ!

ಮೊಳಗಿತ್ತು ಆ ಗಳಿಗೆ
'ಭವತೀ ಭಿಕ್ಷಾಂ ದೇಹಿ'—
ಎಂಬ ನಿನ್ನ ಧ್ವನಿಗೆ
ಶಂಖ ಧ್ವನಿ ಸಾಟಿ

ಬೆಚ್ಚುತ್ತ ಎಚ್ಚೆತ್ತೆ
ಕೈಮುಗಿದು ನಾನಿಂತೆ
ನನ್ನುಳಿದ ಬದುಕನ್ನೆ
ಭಿಕ್ಷೆ ನಿನಗಿತ್ತೆ

ನಿನ್ನ ಅಡಿಯಲ್ಲೆನ್ನ
ಮುಡಿಯು ಬಾಗಿರಲು
ವಿಶ್ವ ಪ್ರಭುವೇ—ನಿನ್ನ
ಶ್ರೀಪಾದ ಕಂಡೆ

ಅಚ್ಚರಿಯ ಆನಂದ
ತುಂಬಿ ಬರುತಿರಲಿಂದೆ
ನಾ ವಿವೇಕಾನಂದ-
ದಲಿ ಲೀನವಾದೆ

ನಾನಿಲ್ಲವಾದೆ
ನೀನೆಲ್ಲವಾದೆ
ನಿನ್ನ ಜೋಳಿಗೆಯಲ್ಲಿ
ಭಿಕ್ಷೆ ಕೂಳಾದೆ !

ವಿಜಯ ಭಾರತಿ